

بِسۡمِ اللّٰہِ الرَّحۡمٰنِ الرَّحِیۡمِ

# ರಮಝಾನ್ : ಅನುಗ್ರಹಗಳ ಮಾಸ

## ನಮ್ಮ ತಖ್ವದ ಮಟ್ಟವನ್ನು ಉನ್ನತಗೊಳಿಸಲು ಪ್ರಯತ್ನಿಸಬೇಕು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **02–06–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಠಿಸಿದರು:*

**ಯಾ ಅಯ್ಯುಹಲ್ಲದೀನ ಆಮನೂ ಕುತಿಬ ಅಲೈಕುಮುಸ್ಸಿಯಾಮು ಕಮಾ ಕುತಿಬ ಅಲಲ್ಲದೀನ ಮಿನ್ ಕಬ್ಲಿಕುಮ್ ಲಅಲ್ಲಕುಮ್ ತತ್ತಖೂನ್.**

ಓ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕಾಗಿ (ತಖ್ವವನ್ನು ಹೊಂದಿದವರಾಗಲಿಕ್ಕೋಸ್ಕರ). (ಪವಿತ್ರ ಖುರ್‌ಆನ್ 2: 184).

ಅಲ್‌ಹಮ್‌ದುಲಿಲ್ಲಾಹ್– ಅಲ್ಲಾಹನಿಗೆ ಸರ್ವಸ್ತುತಿಗಳು. ನಮಗೆ ನಮ್ಮ ಜೀವಿತಕಾಲದಲ್ಲಿ ಇನ್ನೊಂದು ರಮಝಾನ್ ತಿಂಗಳನ್ನು ದಾಟಿ ಹೋಗುವ ಭಾಗ್ಯ ಲಭಿಸುತ್ತಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ಸ್ವರ್ಗವನ್ನು ವರ್ಷದ ಆರಂಭದಿಂದ ಕೊನೆಯ ತನಕ ರಮಝಾನಿಗೋಸ್ಕರ ಶೃಂಗರಿಸಲಾಗುತ್ತಿದೆ. ಇನ್ನೊಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದುದಾಗಿ ವರದಿಯಾಗಿದೆ: ಒಬ್ಬನು ಸತ್ಯವಿಶ್ವಾಸಿಯಾಗಿ ತನ್ನ ಆತ್ಮ ಪರಿಶೋಧನೆ ನಡೆಸುತ್ತಾ ರಮಝಾನಿನ ಉಪವಾಸಗಳನ್ನು ಅನುಷ್ಠಿಸಿದರೆ ಅವನು ಅದಕ್ಕೆ ಮೊದಲು ಮಾಡಿದ ಪಾಪ ಕೃತ್ಯಗಳು ಕ್ಷಮಿಸಲ್ಪಡುವುವು. ರಮಝಾನಿನ ಅನುಗ್ರಹಗಳು ಎಷ್ಟೆಲ್ಲಾ ಇವೆ ಎಂದು ನಿಮಗೆ ತಿಳಿದಿದ್ದರೆ ನೀವು ಖಂಡಿತವಾಗಿಯೂ ಇಚ್ಛಿಸುತ್ತಿದ್ದಿರಿ– ಇಡೀ ವರ್ಷ ರಮಝಾನ್ ಆಗಲಿ ಎಂದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಾನು ಉಲ್ಲೇಖಿಸಿದ ಎರಡನೆಯ ಹದೀಸಿನಲ್ಲಿ ಸ್ಪಷ್ಟವಾಗಿ ಹೇಳಿರುವುದು, ಸತ್ಯವಿಶ್ವಾಸಿಯಾಗಿ ಆತ್ಮ ಪರಿಶೋಧನೆ ನಡೆಸುತ್ತಾ ರಮಝಾನಿನ ಉಪವಾಸ ಅನುಷ್ಠಿಸುವವನಿಗೆ ಮಾತ್ರ ಮೇಲೆ ವಿವರಿಸಿದ ಸ್ಥಾನ ಲಭಿಸುತ್ತದೆ ಎಂದು. ಮನುಷ್ಯನು ಮೇಲೆ ವಿವರಿಸಿದ ಸ್ಥಿತಿಯಲ್ಲಿದ್ದರೆ ಅವನ ಪಾಪ ಕೃತ್ಯಗಳು ಕ್ಷಮಿಸಲ್ಪಡುತ್ತವೆ. ಮನುಷ್ಯನು ತನ್ನ ವಿಶ್ವಾಸದ ಮಟ್ಟವನ್ನು ವರ್ಧಿಸಬೇಕಾಗಿದೆ. ತನ್ನ ಆತ್ಮ ಪರಿಶೋಧನೆ ಮಾಡಬೇಕಾಗಿದೆ. ತನ್ನ ಬಲಹೀನತೆಗಳನ್ನು ನೋಡಬೇಕು. ತನ್ನ ಕರ್ಮಗಳನ್ನೂ ನೋಡಬೇಕು. ತಾನು **ಹುಖೂಖುಲ್ಲಾಹ್** ಮತ್ತು **ಹುಖೂಖುಲ್ ಇಬಾದ್** ಈಡೇರಿಸಿದ ಬಗ್ಗೆ ಚಿಂತಿಸಬೇಕು. ತನ್ನ ಕರ್ಮಗಳನ್ನು ಅಲ್ಲಾಹನ ಸಂಪ್ರೀತಿಗಳಿಸಲಿಕ್ಕೋಸ್ಕರ ಮಾಡಲು ಪ್ರಯತ್ನಿಸಬೇಕು. ಹೀಗೆ ಮಾಡಿದರೆ ಮಾತ್ರ ಪಾಪಗಳು ಕ್ಷಮಿಸಲ್ಪಡುವುವು. ಇದೇ ಉದ್ದೇಶ ಲಕ್ಷ್ಯವನ್ನು ಉಪವಾಸಗಳ ಅನುಷ್ಠಾನ ಮೂಲಕ ಗಳಿಸಬೇಕೆಂದು ಅಲ್ಲಾಹನು ಸಹ ಪವಿತ್ರ ಖುರ್‌ಆನ್ ವಚನಗಳಲ್ಲಿ ಹೇಳಿದ್ದಾನೆ. ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು, ನಿಮಗೆ ಉಪವಾಸದ ಅನುಷ್ಠಾನ ಕಡ್ಡಾಯ ಮಾಡಿದುದು ನೀವು ತಖ್ವ ಹೊಂದುವವರಾಗಲಿಕ್ಕಾಗಿದೆ ಎಂದು ಹೇಳಿರುವನು. ತಖ್ವ ಎಂದರೆ ಪ್ರತಿಯೊಂದು ಕೆಲಸ ಅಲ್ಲಾಹನ ಸಂಪ್ರೀತಿಗಳಿಸಲಿಕ್ಕೋಸ್ಕರವಾಗಬೇಕು. ತಖ್ವ ಇದ್ದರೆ ಮಾತ್ರ ಉಪವಾಸದಿಂದ ಅನುಗ್ರಹ ಗಳಿಸಲು ಸಾಧ್ಯವಾಗುವುದು ಮತ್ತು ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಸಾಧ್ಯವಾಗುವುದು. ಶೈತಾನನು ಅಲ್ಲಾಹನೊಂದಿಗೆ ಬಹಿರಂಗ ಪಂಥಾಹ್ವಾನ ನೀಡಿದ್ದಾನೆ. ಮನುಷ್ಯನು ಅಲ್ಲಾಹನ ಆಶ್ರಯದಿಂದ ಒಂದಿಷ್ಟು ದೂರ ಸರಿದರೆ ತಕ್ಷಣ ಶೈತಾನನು ಅವನನ್ನು ಹಿಡಿಗೂಡುತ್ತಾನೆ. ಒಟ್ಟಿನಲ್ಲಿ, ಸತ್ಯವಿಶ್ವಾಸದಲ್ಲಿ ಅಭಿವೃದ್ಧಿ ಮತ್ತು ಆತ್ಮ ಪರಿಶೋಧನೆ ಮನುಷ್ಯನನ್ನು ಅಲ್ಲಾಹನ ಆಶ್ರಯಪಡೆಯುವವನನ್ನಾಗಿ ಮಾಡುತ್ತದೆ. ಆದರೆ ಮನುಷ್ಯನು ತಖ್ವವನ್ನು ಅವಲಂಬಿಸಿ ಕಾರ್ಯನಿರತನಾಗುವಾಗ ಮಾತ್ರ ಇದು ಸಾಧ್ಯವಾಗುತ್ತದೆ.

ಸತ್ಯವಿಶ್ವಾಸದ ಸ್ಥಿತಿ ಮತ್ತು ಮಟ್ಟ ಹೇಗಿರಬೇಕು, ತಖ್ವದ ಸ್ಥಿತಿ ಮತ್ತು ಮಟ್ಟ ಹೇಗಿರಬೇಕು ಮತ್ತು ಇದನ್ನು ಗಳಿಸಲು ಸಾಧ್ಯವಾಗುವುದು ಹೇಗೆ ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ತಿಳಿಸಿದ್ದಾರೆ: ಅಲ್ಲಾಹನನ್ನು ಗುರುತಿಸುವ ತನಕ ಈಮಾನ್ ಸ್ಥಾಪಿತವಾಗಲಾರದು. ನಾವು ಸಾಗಬೇಕಾದ ಬಹಳ ಹೆಚ್ಚಿನ ದೂರ ಅಲ್ಲಾಹನನ್ನು ಪರಿಚಯಿಸುವುದಾಗಿದೆ. ನಾವು ಅವನನ್ನು ಗುರುತಿಸಬೇಕು. ನಾವು ಅಲ್ಲಾಹನ ಬಗ್ಗೆ ಹೊಂದಿರುವ ಪರಿಚಯ ನ್ಯೂನತೆಯಿಂದ ಕೂಡಿದ್ದೂ ಸಂಶಯಕರವೂ ಗೊಂದಲಮಯವೂ ಆಗಿದ್ದರೆ ನಮ್ಮ ವಿಶ್ವಾಸ ಪ್ರಕಾಶಭರಿತವಾಗಲಾರದು. ಅಲ್ಲಾಹನನ್ನು ಗುರುತಿಸುವುದು ಹೇಗೆ? ಅದು ಅಲ್ಲಾಹನ ರಹೀಮಿಯ್ಯತ್ (ಕಾರುಣ್ಯ) ಪ್ರಕಟಣೆ ಮೂಲಕವಾಗುವುದು. ನಾವು ಅಲ್ಲಾಹನೊಂದಿಗೆ ಎಂತಹ ಸಂಬಂಧ ಹೊಂದಬೇಕೆಂದರೆ ಆ ಮೂಲಕ ಅಲ್ಲಾಹನ ರಹೀಮಿಯ್ಯತ್, ಅನುಗ್ರಹ ಮತ್ತು ಶಕ್ತಿಸಾಮರ್ಥ್ಯ ನಮ್ಮ ಅನುಭವಕ್ಕೆ ಬರುವಂತಾಗಬೇಕು. ನಾವು ಅಲ್ಲಾಹನ ಆರಾಧನೆಯಲ್ಲಿ ಮತ್ತು ಅವನೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಅಸಾಧಾರಣ ರೀತಿಯಲ್ಲಿ ಕಾರ್ಯನಿರತರಾಗುವಾಗ ಇವು ನಮ್ಮ ಅನುಭವಕ್ಕೆ ಬರುವುವು. ಅಲ್ಲಾಹನ ರಹೀಮಿಯ್ಯತ್, ಅನುಗ್ರಹ ಮತ್ತು ಶಕ್ತಿ ಸಾಮರ್ಥ್ಯಗಳ ಗುಣಗಳು ನಮ್ಮ ಅನುಭವಕ್ಕೆ ಬರುವಾಗ ಅವು ನಮ್ಮನ್ನು ಇಂದ್ರಿಯಾಸಕ್ತಿಗಳಿಂದ ಬಿಡುಗಡೆ ಗೊಳಿಸುತ್ತವೆ. ಬಲಹೀನ ವಿಶ್ವಾಸ ಮತ್ತು ಬಲಹೀನ ದೃಢತೆಯ ಕಾರಣದಿಂದಲೇ ಇಂದ್ರಿಯಾಸಕ್ತಿಗಳು ಹುಟ್ಟುತ್ತವೆ. ವಿಶ್ವಾಸ

ಬಲಹೀನವಾಗಿಲ್ಲವಾದರೆ, ಅಲ್ಲಾಹನ ಬಗ್ಗೆ ದೃಢತೆ ಪರಿಪೂರ್ಣವಾಗಿದ್ದರೆ ಇಂದ್ರಯಾಸಕ್ತಿಗಳು ಹುಟ್ಟಲಾರವು. ಈ ಲೋಕದ ಸುಖಸೌಲಭ್ಯಗಳು ಸ್ವತ್ತುಗಳು ಮತ್ತು ಸಂಪತ್ತು ಮನುಷ್ಯನಿಗೆ ಎಷ್ಟು ಪ್ರಿಯಕರವಾಗಿವೆಯೋ ಅಷ್ಟು ಪರಲೋಕ ಜೀವಿತದ ಅನುಗ್ರಹಗಳು ಪ್ರಿಯಕರವಾಗಿಲ್ಲ. ಪರಲೋಕದ ಅನುಗ್ರಹಗಳು ಇಹಲೋಕದಷ್ಟೇ ಅವನಿಗೆ ಪ್ರಿಯಕರವಾಗಿರುತ್ತಿದ್ದರೆ ಅವುಗಳನ್ನು ಗಳಿಸಲು ಇಹಲೋಕದ ವಸ್ತುಗಳನ್ನು ಗಳಿಸಲು ಮಾಡುವಷ್ಟು ಪ್ರಯತ್ನವನ್ನಾದರೂ ಮನುಷ್ಯರು ಮಾಡುತ್ತಿದ್ದರು. ಮಾತ್ರವಲ್ಲ ಅದಕ್ಕಿಂತ ಹೆಚ್ಚು ಪ್ರಯತ್ನ ಮಾಡುತ್ತಿದ್ದರು. ಇದರಿಂದ ಸ್ಪಷ್ಟವಾಗುವುದೇನೆಂದರೆ ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಬಗ್ಗೆ, ಅವನ ಕಾರುಣ್ಯದ ಬಗ್ಗೆ, ಅವನ ವಾಗ್ದಾನಗಳ ಬಗ್ಗೆ ಮನುಷ್ಯರಿಗೆ ವಾಸ್ತವಿಕವಾದ ವಿಶ್ವಾಸವಿಲ್ಲ ಎಂದಾಗಿದೆ. ಈ ವಿಷಯದ ಬಗ್ಗೆ ಪರಿಶೋಧಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಸ್ಪಷ್ಟೀಕರಣದಿಂದ ಚೆನ್ನಾಗಿ ಮನವರಿಕೆ ಆಗುವುದೇನೆಂದರೆ ಈಮಾನ್ (ಸತ್ಯವಿಶ್ವಾಸ) ಸಾಮಾನ್ಯವಾದುದೇನೂ ಅಲ್ಲ. ಇದು ಬಹಳ ದೊಡ್ಡ ವಸ್ತುವಾಗಿದೆ. ಅದು ಬಹಳ ದೊಡ್ಡ ಗುರಿಯಾಗಿದೆ. ಆ ಗುರಿಯನ್ನು ನಮಗೆ ನೀಡಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: ಅಲ್ಲಾಹನ ಬಗ್ಗೆ ವಿಶ್ವಾಸ (ಈಮಾನ್) ಎರಡು ರೀತಿಗಳಲ್ಲಿವೆ. ಒಂದು ವಿಶ್ವಾಸ ಕೇವಲ ನಾಲಗೆಗೆ ಸೀಮಿತವಾಗಿದೆ. ಕರ್ಮಗಳ ಮೇಲೆ ಆ ವಿಶ್ವಾಸ ಯಾವ ಪ್ರಭಾವವನ್ನೂ ಬೀರುವುದಿಲ್ಲ. ಎರಡನೇ ಬಗೆಯ ವಿಶ್ವಾಸದೊಂದಿಗೆ ಕೃತ್ಯ ರೂಪದ ಸಾಕ್ಷ್ಯಗಳಿರುತ್ತವೆ. ಆದುದರಿಂದ ಈ ಎರಡನೆಯ ರೀತಿಯ ವಿಶ್ವಾಸ ಹುಟ್ಟುವ ತನಕ ಒಬ್ಬ ಮನುಷ್ಯನು ಅಲ್ಲಾಹನನ್ನು ನಂಬುತ್ತಾನೆಂದು ನಾನು ಹೇಳಲಾರೆ. ಒಬ್ಬನು ಅಲ್ಲಾಹನನ್ನು ನಂಬುತ್ತಾನೆ ಮತ್ತು ಪಾಪಕೃತ್ಯಗಳನ್ನು ಸಹ ಮಾಡುತ್ತಾನೆ ಎಂಬುದು ಹೇಗೆಂದು ನನಗೆ ಅರ್ಥವಾಗುವುದಿಲ್ಲ. ಲೋಕದ ಜನ ಸಂಖ್ಯೆಯ ಬಹಳ ದೊಡ್ಡ ಭಾಗ ಮೇಲೆ ವಿವರಿಸಿದ ಒಂದನೆಯ ಬಗೆಯ ವಿಶ್ವಾಸವನ್ನು ಹೊಂದಿದವರದ್ದಾಗಿದೆ. ಅವರು ಅಲ್ಲಾಹನನ್ನು ನಂಬುವುದಾಗಿ ಹೇಳುವುದು ನನಗೆ ತಿಳಿದಿದೆ. ಅವರು ಅದರೊಂದಿಗೆ ಲೌಕಿಕ ಕೊಳಕುಗಳಲ್ಲಿ ಮುಳುಗಿರುತ್ತಾರೆ ಮತ್ತು ಪಾಪಗಳ ಮಾಲಿನ್ಯದಲ್ಲಿ ಸಿಲುಕಿದವರಾಗಿದ್ದಾರೆ.

ಅಲ್ಲಾಹನನ್ನು ಹಾಝಿರ್, ನಾಝಿರ್, (ಉಪಸ್ಥಿತನೂ, ನೋಡುವವನೂ) ಎಂದು ನಂಬುವಾಗ ಹುಟ್ಟಬೇಕಾದ ವಿಶಿಷ್ಟ ವಿಶ್ವಾಸ ಏಕೆ ಹುಟ್ಟುವುದಿಲ್ಲ? ಮನುಷ್ಯನ ಪ್ರಕೃತಿ ಹೇಗಿರುತ್ತದೆ ಎಂದರೆ ಅವನು ಯಾವ ವಸ್ತುವಿನ ಬಗ್ಗೆ ದೃಢ ವಿಶ್ವಾಸ ಹೊಂದಿರುವನೋ ಅದರಿಂದ ಹಾನಿ ಅನುಭವಿಸುವುದನ್ನು ತಡೆಯಲು ಪ್ರಯತ್ನಿಸುತ್ತಾನೆ ಮತ್ತು ಅದರಿಂದ ಲಾಭ ಪಡೆಯಲು ಪ್ರಯತ್ನಿಸುತ್ತಾನೆ. ನೋಡಿರಿ, ಶಂಖಪಾಷಾಣ ಒಂದು ವಿಷವಾಗಿದೆ. ಅದರ ಒಂದಿಷ್ಟು ಸಹ ಮನುಷ್ಯನನ್ನು ಕೊಲ್ಲಲು ಸಾಕು ಎಂದು ತಿಳಿದಿರುವವನು ಅದನ್ನು ತಿನ್ನಲು ಧೈರ್ಯದೋರಲಾರನು. ಏಕೆಂದರೆ ಅದನ್ನು ತಿನ್ನುವುದು ಮೃತ್ಯು ಬರಿಸುವುದೆಂದು ಅವನಿಗೆ ದೃಢವಿಶ್ವಾಸವಿದೆ. ಹೀಗಿರುವಾಗ ಒಬ್ಬನು ಅಲ್ಲಾಹನನ್ನು ನಂಬಿ ಅದರ ಪರಿಣಾಮಗಳನ್ನು ಏಕೆ ಕೃತಿರೂಪದಲ್ಲಿ ತೋರಿಸುವುದಿಲ್ಲ. ಶಂಖಪಾಷಾಣದ ಬಗ್ಗೆ ಇರುವಷ್ಟು ನಂಬಿಕೆಯಾದರೂ ಮನುಷ್ಯನಿಗೆ ಅಲ್ಲಾಹನ ಬಗ್ಗೆ ಇದ್ದಲ್ಲಿ ಅವನ ಭಾವೋದ್ವೇಗಗಳು ಉತ್ಸಾಹಗಳು ನಿರ್ಜೀವವಾಗುತ್ತಿತ್ತು. ಆದರೆ ಹಾಗೆ ಆಗುವುದಿಲ್ಲ. ಆದುದರಿಂದ ಮನುಷ್ಯನಿಗೆ ಕಡ್ಡಾಯವಾದ ಮೊದಲನೆಯ ವಿಷಯ ಅಲಾಹನ ಬಗ್ಗೆ ಹೊಂದಿರುವ ವಿಶ್ವಾಸವನ್ನು ದುರುಸ್ತಿ ಮಾಡುವುದಾಗಿದೆ. ಎಂದರೆ ಅವನು ತನ್ನ ಕೃತ್ಯಗಳ ಮೂಲಕ ಅದನ್ನು ಸಾಬೀತುಗೊಳಿಸಬೇಕು. ಅಲ್ಲಾಹನ ವೈಭವಕ್ಕೂ ಅವನ ಆಜ್ಞೆಗಳಿಗೂ ವಿರುದ್ಧವಾದ ಯಾವ ಕೆಲಸವನ್ನೂ ಮಾಡುವುದಿಲ್ಲ ಎಂದು ಅವನು ತೋರಿಸಿ ಕೊಡಬೇಕು.

ಆದುದರಿಂದ ಇದು ಒಬ್ಬ ಸತ್ಯವಿಶ್ವಾಸಿಯ ಆತ್ಮಪರಿಶೋಧನೆಯ ರೀತಿಯಾಗಿದೆ. ರಮಝಾನ್ ತಿಂಗಳಲ್ಲಿ ಒಂದು ವಿಶಿಷ್ಟ ಪರಿಸರವಿರುತ್ತದೆ. ಆರಾಧನೆ ಮತ್ತು ಸತ್ಕರ್ಮಗಳ ಕಡೆಗೆ ಗಮನ ಹರಿಸುವಂತಹ ಸ್ಥಿತಿ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆರಾಧನೆಗಳ ಕಡೆಗೆ ಮತ್ತು ಸತ್ಕರ್ಮಗಳ ಕಡೆಗೆ ಗಮನ ಹರಿಸುತ್ತಾ ನಮ್ಮ ಕರ್ಮಗಳ ಕಡೆಗೆ ಗಮನ ಹರಿಸುತ್ತಾ ನಮ್ಮ ಅಲ್ಲಾಹನ ಮುಂದೆ ಬಾಗುತ್ತಾ ನಮ್ಮ ಹಿಂದಿನ ಪಾಪ ಕೃತ್ಯಗಳ ಬಗ್ಗೆ ಕ್ಷಮೆಯನ್ನು ಯಾಚಿಸಬೇಕು. ಅನಂತರ ಈ ರಮಝಾನ್ ಕಾಲವನ್ನು ನಮ್ಮ ಮುಂದಿನ ಜೀವಿತದ ಸ್ಥಿರವಾದ ಭಾಗವನ್ನಾಗಿ ಮಾಡಬೇಕು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ನಿಮ್ಮ ವಿಶ್ವಾಸದ ಸ್ಥಿತಿಯನ್ನು ಪರಿಶೋಧಿಸುತ್ತಾ ರಮಝಾನ್ ತಿಂಗಳನ್ನು ದಾಟಿ ಹೋಗಿರಿ. ಇದರ ಅರ್ಥವೇನೆಂದರೆ ತಖ್ವದಲ್ಲಿ ಅಭಿವೃದ್ಧಿ ಹೊಂದುತ್ತಾ ನಿಮ್ಮನ್ನು ಅಲ್ಲಾಹನ ಸಂಪ್ರೀತಿಗೆ ಅಧೀನವಾಗಿರಿಸುತ್ತಾ ಈ ದಿನಗಳನ್ನು ಕಳೆಯಬೇಕೆಂದು. ನೀವು ಜಯಶಾಲಿಯಾಗಿ ಈ ತಿಂಗಳನ್ನು ದಾಟಿ ಹೋದರೆ ತಖ್ವ ನಿಮ್ಮ ಜೀವಿತದ ಸ್ಥಿರವಾದ ಭಾಗವಾಗುವುದು. ಆಗ ಮನುಷ್ಯನು ತನ್ನ ಕರ್ಮಗಳನ್ನು ಕೇವಲ ರಮಝಾನ್‌ನಲ್ಲಿ ಮಾತ್ರ ದುರುಸ್ತಿ ಮಾಡುವವನಾಗಲಾರನು. ಅವನಿಗೆ ದೊರಕುವ ಅನುಗ್ರಹ ಜಾರಿಯಲ್ಲಿರುವ ಅನುಗ್ರಹವಾಗುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದರ ಕಡೆಗೆ ಗಮನ ಹರಿಸುತ್ತಾ ಹೇಳುತ್ತಾರೆ– ಪವಿತ್ರ ಖುರ್‌ಆನ್ ಮತ್ತು ಇಸ್ಲಾಮ್ ಧರ್ಮಗಳ ಉದ್ದೇಶ ಜನರಲ್ಲಿ ತಖ್ವವನ್ನು ಹುಟ್ಟುವಂತೆ ಮಾಡುವುದಾಗಿದೆ. ಆದರೆ ಈಗ ಅದು ನಮಗೆ ಕಾಣಿಸುವುದಿಲ್ಲ. ಉಪವಾಸ ಅನುಷ್ಠಿಸುತ್ತಾರೆ, ನಮಾಝ್ ನಿರ್ವಹಿಸುತ್ತಾರೆ, ಆದರೆ ತಖ್ವರಹಿತರಾಗಿರುವ ಕಾರಣದಿಂದ ಈ ನಮಾಝ್‌ಗಳು ಮತ್ತು ಉಪವಾಸಗಳು ಅವರನ್ನು ಪಾಪಿಗಳನ್ನಾಗಿ ಮಾಡುತ್ತವೆ.

ಇಸ್ಲಾಮಿನ ಹೆಸರಲ್ಲಿ ಇಂದಿನ ಕಾಲದಲ್ಲಿ ನಾವು ನೋಡುತ್ತಿರುವ ಭಯೋತ್ಪಾದಕ ಕೃತ್ಯಗಳು ಮತ್ತು ನಿರಪರಾಧಿಗಳ ಹತ್ಯೆಗಳು ತಖ್ವ ಇಲ್ಲದುದರಿಂದ ಘಟಿಸುವವುಗಳಾಗಿವೆ. ತಖ್ವ ರಹಿತರಾದ ಇಂತಹ ಜನರಿಗೆ ರಮಝಾನ್ ಹೇಗೆ ಪ್ರಯೋಜನ ನೀಡಬಲ್ಲದು. ಅವರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಹೆಸರಲ್ಲಿ ದೌರ್ಜನ್ಯ ಮಾಡುತ್ತಿದ್ದಾರೆ. ಅವರು ರಮಝಾನ್‌ನಿಂದ ಎಂದೂ

ಅನುಗ್ರಹ ಗಳಿಸಲಾರರು. ಅವರು ಅಲ್ಲಾಹನ ಹಿಡಿತಕ್ಕೆ ಒಳಗಾಗುವವರಾಗಿದ್ದಾರೆ. ದೌರ್ಜನ್ಯ ಮತ್ತು ಬರ್ಬರ ಕೃತ್ಯಗಳ ಘಟನೆಗಳ ಬಗ್ಗೆ ಆಲಿಸುವ ಮತ್ತು ನೋಡುತ್ತಿರುವ ಈ ಕಾಲಘಟ್ಟದಲ್ಲಿ ಅಹ್ಮದಿಯರಾದ ನಾವು ಮೊದಲಿಗಿಂತ ಹೆಚ್ಚಾಗಿ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ, ಅಲ್ಲಾಹನನ್ನು ಸ್ತುತಿಸುತ್ತಾ, ನಮ್ಮನ್ನು ಈ ದೌರ್ಜನ್ಯಗಾರರಿಂದ ಬೇರ್ಪಡಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯ ನೀಡಿದುದಕ್ಕಾಗಿ ಅಲ್ಲಾಹನನ್ನು ಸ್ತುತಿಸುತ್ತಾ ನಮ್ಮ ಕರ್ಮಗಳ ಮೇಲೆ ದೃಷ್ಟಿ ಇರಿಸಬೇಕು. ನಮ್ಮ ವಿಶ್ವಾಸವನ್ನು ಬಲಪಡಿಸಲು ಚಿಂತಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈಮಾನಿನ ಬೇರು ತಖ್ವ ಮತ್ತು ಪರಿಶುದ್ಧಿಯಾಗಿದೆ. ಅವುಗಳಿಂದಲೇ ಈಮಾನ್ ಹುಟ್ಟುತ್ತದೆ. ಅವುಗಳಿಂದಲೇ ಅದಕ್ಕೆ ನೀರೆರೆಯಲ್ಪಡುತ್ತದೆ. ಇಂದ್ರಿಯಾಸಕ್ತಿಗಳು ದಬಾಯಸಲ್ಪಡುತ್ತವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಉಪದೇಶಗಳಿಂದ ಸ್ಪಷ್ಟವಾಗುವುದೇನೆಂದರೆ ತಖ್ವವಿಲ್ಲದಿದ್ದರೆ ಈಮಾನ್ ಹುಟ್ಟಲಾರದು. ತಖ್ವ ವಿಶ್ವಾಸದ ಬೇರು ಮಾತ್ರವಲ್ಲ ಸತ್ಯವಿಶ್ವಾಸದ ಸಂರಕ್ಷಣೆ ಮತ್ತು ಪೋಷಣೆ ಸಹ ತಖ್ವದ ಮೂಲಕವೇ ನಡೆಯುತ್ತದೆ. ತಖ್ವವಿದ್ದರೆ ಮಾತ್ರ ಕರ್ಮಗಳು ಒಳ್ಳೆಯದಾಗುವುವು. ಕರ್ಮಗಳು ಒಳ್ಳೆಯದಾಗಿದ್ದರೆ ಮತ್ತು ಅವು ಅಲ್ಲಾಹನ ಸಂಪ್ರೀತಿ ಅನುಸಾರವಾಗಿದ್ದರೆ ಈಮಾನ್‌ನಲ್ಲಿ ಅಭಿವೃದ್ಧಿ ಉಂಟಾಗುವುದು. ಇದರಿಂದ ಈ ವಿಷಯ ಸಹ ಸ್ಪಷ್ಟವಾಗುತ್ತದೆ. ರಮಝಾನಿನ ಅನುಗ್ರಹ ಫಲಗಳು ಸಹ ತಖ್ವದಲ್ಲಿ ಅಭಿವೃದ್ಧಿ ಪಡೆಯದಿದ್ದರೆ ಲಭಿಸಲಾರದು ಎಂದು. ತಖ್ವ ವರ್ಧಿಸಿದರೆ ಈಮಾನ್ ವರ್ಧಿಸುವುದು. ಆತ್ಮ ಪರಿಶೋಧನೆ ಬಗ್ಗೆ ಗಮನ ಹರಿಯುವುದು. ಆತ್ಮ ಪರಿಶೋಧನೆ ಬಗ್ಗೆ ಗಮನ ಹರಿಸುವಾಗ ಇಂದ್ರಿಯಾಸಕ್ತಿಗಳು ತಗ್ಗುವುವು. ಇಂದ್ರಿಯಾಸಕ್ತಿಗಳ ತಗ್ಗುವಿಕೆಯಿಂದ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವಂತೆ ಮಾಡಿ ಅವನ ಸಾಮೀಪ್ಯವನ್ನು ದೊರಕಿಸಿ ಕೊಡುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವಾಸ್ತವಿಕ ತಖ್ವದಿಂದ ಮನುಷ್ಯನು ತೊಳೆಯಲ್ಪಟ್ಟು ಸ್ವಚ್ಛವಾಗುತ್ತಾನೆ. ತಖ್ವವನ್ನು ಸ್ಥಾಪಿಸಲು ಪ್ರವಾದಿಗಳು ಆಗಮಿಸುತ್ತಾರೆ. ಅಂತಹ ತಖ್ವ ಲೋಕದಿಂದ ಈಗ ಕಣ್ಮರೆಯಾಗಿದೆ. ಪರಿಶುದ್ಧತೆ ಉತ್ತಮವಾದುದಾಗಿದೆ. ಮನುಷ್ಯನು ಪರಿಶುದ್ಧನಾದರೆ ದೇವದೂತರು ಅವನಿಗೆ ಹಸ್ತದಾನ ಮಾಡುತ್ತಾರೆ. ಜನರಲ್ಲಿ ಇದರ ಬಗ್ಗೆ ಲಕ್ಷ್ಯವಿಲ್ಲ. ಅವರಿಗೆ ಪ್ರಿಯವಾದ ವಸ್ತುಗಳು ಧರ್ಮಬದ್ಧವಾದ ರೀತಿಯಲ್ಲಿ ಅವರಿಗೆ ದೊರಕುವ ಬಗ್ಗೆ ಸಹ ಲಕ್ಷ್ಯವಿಲ್ಲ. ಹದೀಸಿನಲ್ಲಿ ಹೀಗೆ ಬರೆಯಲಾಗಿದೆ. ಕಳ್ಳನು ಸತ್ಯವಿಶ್ವಾಸಿಯಾಗಿರುವಾಗ ಕಳ್ಳತನ ಮಾಡಲಾರನು. ಆಡಿನ ತಲೆಯ ಮುಂದೆ ಸಿಂಹ ನಿಂತಿದ್ದರೆ ಅದು ಆಹಾರ ತಿನ್ನುವುದನ್ನು ಸಹ ಮರೆತು ಬಿಡುತ್ತದೆ. ಅದು ಅನ್ಯನ ಹೊಲಕ್ಕೆ ಹೋಗಿ ಮೇಯುವ ವಿಷಯ ಬಿಡಿ. ಆದುದರಿಂದ ಇದೇ ರೀತಿ ಅಲ್ಲಾಹನ ಭಯವಿದ್ದರೆ ಪಾಪ ಮಾಡುವುದು ಅಸಾಧ್ಯವಾಗುತ್ತದೆ. ಮೂಲ ಬೇರು ಮತ್ತು ಉದ್ದೇಶಲಕ್ಷ್ಯ ತಖ್ವ ಆಗಿದೆ. ಯಾರಿಗೆ ತಖ್ವ ನೀಡಲ್ಪಟ್ಟಿದೆಯೋ ಅವನು ಎಲ್ಲವನ್ನೂ ಗಳಿಸಬಲ್ಲನು. ತಖ್ವ ಇಲ್ಲದಿದ್ದರೆ ಮಹಾಪಾಪಗಳಿಂದಲೂ ಚಿಕ್ಕ ಪಾಪಗಳಿಂದಲೂ ರಕ್ಷಣೆ ಪಡೆಯುವುದು ಅಸಾಧ್ಯ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಮನುಷ್ಯನು ತಾನು ಏಕಾಂಗಿ ಎಂದು ಭಾವಿಸಿ ಪಾಪ ಮಾಡುತ್ತಾನೆ. ತಾನು ಏಕಾಂಗಿ ಎಂದು ಯೋಚಿಸುವಾಗ ಅಲ್ಲಾಹನು ನನ್ನನ್ನು ನೋಡುತ್ತಾ ಇಲ್ಲ ಎಂದು ಭಾವಿಸುತ್ತಾನೆ. ಇದರ ಅರ್ಥವೇನೆಂದರೆ ಅವನು ಆಗ ನಾಸ್ತಿಕನಾಗುತ್ತಾನೆ ಮತ್ತು ನನ್ನ ಅಲ್ಲಾಹ್ ನನ್ನ ಜೊತೆಗಿದ್ದಾನೆ ನನ್ನನ್ನು ನೋಡುತ್ತಾನೆ ಎಂದು ಯೋಚಿಸುವುದಿಲ್ಲ. ಅವನಿಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ನಂಬಿಕೆ ಇದ್ದರೆ ಅವನು ಪಾಪಕೃತ್ಯ ಮಾಡುತ್ತಿರಲಿಲ್ಲ. ಪ್ರತಿಯೊಂದು ವಸ್ತು ತಖ್ವವನ್ನು ಅವಲಂಬಿಸಿದೆ. ಪವಿತ್ರ ಖುರ್‌ಆನ್ ಅದರಿಂದಲೇ ಆರಂಭವಾಗಿದೆ. **ಇಯ್ಯಾಕ ನಅ್‌ಬುದು ವಇಯ್ಯಾಕ ನಸ್ತಈನ್** (ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ.) ಇದರ ಉದ್ದೇಶ ಸಹ ತಖ್ವವೇ ಆಗಿದೆ. ಮನುಷ್ಯನು ಕೆಲಸ ಮಾಡುವಾಗ ಅದು ತಾನು ಮಾಡುತ್ತೇನೆ ಎಂದು ಹೇಳಲು ಧೈರ್ಯಪಡದೆ ಅಲ್ಲಾಹನ ಸಹಾಯ ಯಾಚಿಸುತ್ತಾನೆ. ಇದೇ **ಇಯ್ಯಾಕ ನಸ್ತಈನ್** ಆಗಿದೆ. ಅವನು ಹೇಳುತ್ತಾನೆ: ನಾನು ಮಾಡುವ ಆರಾಧನೆ ಸಹ ನಿನ್ನ ಸಹಾಯದ ಮೂಲಕವೇ ಆಗಿದೆ. ನಿನ್ನ ಸಹಾಯವಿಲ್ಲದೆ ಆರಾಧನೆ ಮಾಡಲಾರೆ ಎಂದು ಹೇಳುತ್ತಾನೆ. ಮುಂದೆ ಸಹ ಆರಾಧನೆ ಮಾಡಲು ಭಾಗ್ಯ ಲಭಿಸಲಿ ಎಂದು ಬೇಡಿಕೊಳ್ಳುತ್ತಾನೆ. ಆದುದರಿಂದ ಇದು ತಖ್ವವನ್ನು ಹೊಂದಬೇಕಾದ ಮಟ್ಟವಾಗಿದೆ. ತಖ್ವ ಇದ್ದರೆ ಈ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುವು. ಮನುಷ್ಯನು ಮುತ್ತಖಿ ಆಗಿದ್ದರೆ ಮಾತ್ರ ಅವನ ನಮಾಝ್, ಉಪವಾಸ ವ್ರತ ಮತ್ತು ಝಕಾತ್‌ಗಳು ಸ್ವೀಕೃತವಾಗುತ್ತವೆ. ತಖ್ವ ಇಲ್ಲದಿದ್ದರೆ ಅವನಿಂದ ಸತ್ಕರ್ಮಗಳು ಸಹ ಸ್ವೀಕರಿಸಲ್ಪಡಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಪವಿತ್ರ ಖುರ್‌ಆನಿನ ವಚನ– **ಇನ್ನಲ್ಲದೀನ ಖಾಲೂ ರಬ್ಬುನಲ್ಲಾಹು ಸುಮ್ಮಸ್ತಖಾಮೂ ತತನಝ್ಝಲು ಅಲೈಹಿಮುಲ್ ಮಲಾಯಿಕತು ಅಲ್ಲಾ ತಖಾಫೂ ವಲಾ ತಹ್‌ಝನೂ.** (ಯಾರು ಅಲ್ಲಾಹನು ನಮ್ಮ ಪ್ರಭು ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬರುತ್ತಾರೆ). ಇಲ್ಲಿ ಸಹ ಮುತ್ತಖಿ (ತಖ್ವ ಹೊಂದಿದವರನ್ನು) ಉದ್ದೇಶಿಸಿ ಹೇಳಲಾಗಿದೆ. ಅವರು ಅಲ್ಲಾಹನು ನಮ್ಮ ಪ್ರಭು ಎಂದು ಹೇಳಿ ಸ್ಥಿರವಾಗಿ ಆ ನಂಬಿಕೆಯನ್ನು ಹೊಂದಿರುತ್ತಾರೆ. ನಮ್ಮ ಆವಶ್ಯಕತೆಗಳನ್ನು ನಮ್ಮ ಪ್ರಭು ಈಡೇರಿಸುವನು ನಮ್ಮನ್ನು ಪರಿಪಾಲನೆ ಮಾಡುವನು ಎಂದು ನಂಬುತ್ತಾರೆ. ಅವರ ಬಳಿಗೆ ದೇವದೂತರು ಇಳಿದು ಬರುತ್ತಾರೆ. ಅವರು ಹೇಳುತ್ತಾರೆ: **ನಹ್‌ನು ಔಲಿಯಾಉಕುಮ್ ಫಿಲ್ ಹಯಾತಿದ್ದುನ್‌ಯಾ ವಫಿಲ್ ಆಖಿರ.** (ಇಹಲೋಕದಲ್ಲೂ ಪರಲೋಕದಲ್ಲೂ ನಾವು ನಿಮ್ಮ ಮಿತ್ರರಾಗಿದ್ದೇವೆ).

ಸ್ಥಿರವಾಗಿ ಒಳಿತುಗಳನ್ನು ಮಾಡುವವರ ಪಾಪಗಳನ್ನು ಅಲ್ಲಾಹನು ಕ್ಷಮಿಸುತ್ತಾನೆ. ಅಲ್ಲದೆ ಲೌಕಿಕ ಅನುಗ್ರಹಗಳನ್ನೂ ಅವರಿಗೆ ನೀಡುತ್ತಾನೆ. ಪರಲೋಕದಲ್ಲೂ ಸಹ ಅವನು ಅವರ ಸಂರಕ್ಷಕನಾಗುತ್ತಾನೆ. ರಮಝಾನ್ ತಿಂಗಳಲ್ಲಿ ತಮ್ಮ ಸ್ಥಿತಿಯನ್ನು ಬದಲಾಯಿಸಿ ಅನಂತರ ಸ್ಥಿರವಾಗಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸಿ ಜೀವಿಸುವವರು ಮತ್ತು ಹಾಗೆ ಮಾಡಲು ಪ್ರಯತ್ನಿಸುವವರು ಎಷ್ಟು ಅದೃಷ್ಟಶಾಲಿಗಳು.

ಅಲ್ಲಾಹನು ನಮ್ಮನ್ನು ಮುತ್ತಖಿಗಳನ್ನಾಗಿ ಮಾಡಲು ಇಚ್ಛಿಸುತ್ತಾನೆ. ಆ ಮೂಲಕ ಅವನ ಅನುಗ್ರಹಗಳ ಬಾಗಿಲುಗಳನ್ನು ನಮಗಾಗಿ ತೆರೆಯಲು ಬಯಸುತ್ತಾನೆ. ರಮಝಾನ್‌ನಲ್ಲಿ ತಖ್ವವನ್ನು ಅವಲಂಬಿಸುವವರಿಗೆ ಅಲ್ಲಾಹನು ತನ್ನ ಅನುಗ್ರಹಗಳ ಬಾಗಿಲುಗಳನ್ನು ವಿಶಿಷ್ಟವಾಗಿ ತೆರೆದಿಡುತ್ತಾನೆ. ಮುತ್ತಖಿಯಾಗಲು ಕೆಡುಕುಗಳನ್ನು ತ್ಯಜಿಸಿದರೆ ಮಾತ್ರ ಸಾಕಾಗಲಾರದು. ಒಳಿತುಗಳನ್ನೂ ಮಾಡಬೇಕು. ಇದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವ್ಯಭಿಚಾರ, ಕಳ್ಳತನ, ಅನ್ಯರ ಹಕ್ಕುಗಳ ಅಪಹಾರ, ಡಂಬಾಚಾರ, ಅಹಂಭಾವ, ತಾತ್ಸಾರಭಾವ, ಜಿಪುಣತನ ಮೊದಲಾದ ದುಸ್ವಭಾವಗಳನ್ನು ತ್ಯಜಿಸಿ ಉತ್ತಮ ನೈತಿಕ ಗುಣಗಳಲ್ಲಿ ಅಭಿವೃದ್ಧಿ ಹೊಂದುವುದು ಮುತ್ತಖಿಯಾಗಲು ಆವಶ್ಯಕವಾಗಿದೆ. ಜನರೊಂದಿಗೆ ಮೃದುವಾಗಿ ಹಸನ್ಮುಖಿಯಾಗಿ, ಸಹಾನುಭೂತಿಯಿಂದ ವರ್ತಿಸಬೇಕು. ಅಲ್ಲಾಹನೊಂದಿಗೆ ಸತ್ಯವಾದ ನಿಷ್ಠೆಯನ್ನು ಹೊಂದಬೇಕು. ಸೇವೆ ಮಾಡುವ ಉನ್ನತ ಮಟ್ಟವನ್ನು ಹುಡುಕಿರಿ. ಈ ಕಾರಣಗಳಿಂದ ಒಬ್ಬನು ಮುತ್ತಖಿಯಾಗುತ್ತಾನೆ. ಈ ಎಲ್ಲ ಗುಣಗಳನ್ನು ಹೊಂದಿದವನೇ ಮುತ್ತಖಿ ಆಗುತ್ತಾನೆ. ಕೇವಲ ಒಂದೊಂದು ಸದ್ಗುಣ ಮಾತ್ರ ಇದ್ದರೆ ಅವನು ಮುತ್ತಖಿ ಆಗಲಾರನು. ಅವನಲ್ಲಿ ಎಲ್ಲ ಸದ್ಗುಣಗಳು ಒಟ್ಟಿಗೆ ಇರಬೇಕು. ಇಂತಹ ಜನರ ಬಗ್ಗೆ **ಲಾಖೌಫುನ್ ಅಲೈಹಿಮ್ ವಲಾಹುಮ್ ಯಹ್‌ಝನೂನ್.** (ಅವರಿಗೆ ಭಯವಿರಲಾರದು ಅವರು ದುಃಖಿಸಲಾರರು) ಎಂದು ಹೇಳಲಾಗಿದೆ. ಅನಂತರ ಏನಾಗುತ್ತದೆ. ಅಲ್ಲಾಹನು ಅವರ ಸಂರಕ್ಷಕನಾಗುತ್ತಾನೆ. **ವಹುವ ಯತವಲ್ಲಸ್ಸಾಲಿಹೀನ್.** (ಅಲ್ಲಾಹನು ಸಾತ್ವಿಕರ ಸಂರಕ್ಷಕನಾಗಿರುತ್ತಾನೆ).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೇವಲ ಬೈಅತ್ ಮಾಡಿ ಅಲ್ಲಾಹನ ಹಿಡಿತದಿಂದ ರಕ್ಷಣೆ ಪಡೆಯಬಹುದು ಎಂದು ಭಾವಿಸುವವರು ತಪ್ಪು ಮಾಡುತ್ತಾರೆ. ಅವರಿಗೆ ಅವರ ಆತ್ಮ ಮೋಸ ಮಾಡಿದೆ. ನೋಡಿರಿ, ವೈದ್ಯನು ನಿರ್ದಿಷ್ಟ ಪ್ರಮಾಣದಲ್ಲಿ ಮದ್ದು ಉಪಯೋಗಿಸಬೇಕೆಂದು ಹೇಳಿದಾಗ ಅಷ್ಟು ಮದ್ದು ಉಪಯೋಗಿಸದಿದ್ದರೆ ರೋಗಶಮನವಾಗಲಾರದು. ಆದುದರಿಂದ ಅಲ್ಲಾಹನು ಆಜ್ಞಾಪಿಸಿದ ರೀತಿಯಲ್ಲಿ ತಖ್ವ ಹೊಂದಿ ಪರಿಶುದ್ಧರಾಗಿರಿ. ಆ ಮೂಲಕ ಅಲ್ಲಾಹನ ಕೋಪದಿಂದ ರಕ್ಷಣೆ ಪಡೆಯಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ತನ್ನ ಕಡೆಗೆ ಪಶ್ಚಾತ್ತಾಪದಿಂದ ತಿರುಗುವವರ ಮೇಲೆ ದಯೆದೋರುತ್ತಾನೆ. ಹೀಗೆ ಮಾಡದಿರುತ್ತಿದ್ದರೆ ಲೋಕದಲ್ಲಿ ಅಂಧಕಾರ ವ್ಯಾಪಿಸುತ್ತಿತ್ತು. ಒಬ್ಬನು ಮುತ್ತಖಿಯಾದರೆ ಅಲ್ಲಾಹನು ಅವನ ಮತ್ತು ಅನ್ಯನ ಮಧ್ಯೆ ವ್ಯತ್ಯಾಸ ತೋರಿಸುತ್ತಾನೆ. ಆದುದರಿಂದ ನಮ್ಮ ಜಮಾಅತಿನವರು ಭಯಪಡಬೇಕು. ಅಲ್ಲಾಹನು ಇಚ್ಛಿಸುವ ಹಾಗೆ ತಖ್ವ ಹೊಂದಿದವರು ರಕ್ಷಿಸಲ್ಪಡುವರು. ಅಲ್ಲಾಹನು ಈ ಜಮಾಅತನ್ನು ತಖ್ವಕ್ಕೋಸ್ಕರವೇ ಸ್ಥಾಪಿಸಿರುವನು. ಏಕೆಂದರೆ ತಖ್ವದ ಮೈದಾನ ಸಂಪೂರ್ಣ ಖಾಲಿಯಾಗಿದೆ.

ಒಂದು ರಮಝಾನ್ ನಮ್ಮ ಜೀವಿತದಲ್ಲಿ ಆಗಮಿಸಿದೆ. ರಮಝಾನ್ ಆಗಮಿಸುವುದು ನೀವು ತಖ್ವ ಹೊಂದಲಿಕ್ಕಾಗಿ ಎಂದು ಅಲ್ಲಾಹನು ಹೇಳಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಜಮಾಅತನ್ನು ತಖ್ವಕ್ಕೋಸ್ಕರವೇ ಸ್ಥಾಪಿಸಲಾಗಿದೆ ಎಂದು ಹೇಳಿದ್ದಾರೆ. ಆದುದರಿಂದ ಇದು ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿಕೆಗಳನ್ನು ಹೊರಿಸುತ್ತದೆ. ನಾವು ನಮ್ಮ ಸ್ಥಿತಿಯ ಬಗ್ಗೆ ಯಾವಾಗಲೂ ಪರಿಶೋಧಿಸುತ್ತಾ ಇರಬೇಕೆಂಬ ಹೊಣೆಗಾರಿಕೆಯನ್ನೂ ಇವು ನಮ್ಮ ಮೇಲೆ ಹೊರಿಸುತ್ತಿವೆ. ಅಲ್ಲಾಹನು ತನ್ನ ವಿಶಿಷ್ಟ ಅನುಗ್ರಹವನ್ನಿರಿಸಿದ ಈ ದಿನಗಳಲ್ಲಿ ನಾವು ನಮ್ಮಲ್ಲಿ ಬದಲಾವಣೆಗಳನ್ನು ಉಂಟುಮಾಡಬೇಕು. ಅಲ್ಲಾಹನು ನಮ್ಮಿಂದ ಬಯಸುವ ರೀತಿಯಲ್ಲಿ ನಮ್ಮ ತಖ್ವದ ಮಟ್ಟವನ್ನು ವರ್ಧಿಸಲು ಪ್ರಯತ್ನಿಸಬೇಕು. ಅದು ಈ ರಮಝಾನಿಗೆ ಮಾತ್ರ ಸೀಮಿತವಾಗಿರದೆ ನಮ್ಮ ಜೀವಿತದ ಭಾಗವಾಗಿ ಮಾಡಬೇಕು. ಅಲ್ಲಾಹನು ನಮಗೆ ಆ ಭಾಗ್ಯ ದಯಪಾಲಿಸಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಮುಕರ್ರಮ್ ಖಾಜಾ ಅಹ್ಮದ್ ಹುಸೈನ್ ಸಾಹೇಬ್ ದರ್‌ವೇಶ್ ಇವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಹೇಳಿ ಅವರ ಸದ್ಗುಣಗಳನ್ನು ವಿವರಿಸಿದರು.)

*****

***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London on 02-06-2017.*


**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon